ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 1, March-April 2025, Pp. 59-63
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕುವೆಂಪು ಅವರ 'ಮಹಾರಾತ್ರಿ' ನಾಟಕದಲ್ಲಿ ರಾಜಕೀಯ ತತ್ವ

**ಸುರೇಶ ಕೆ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*ವರಕವಿ ಬೇಂದ್ರೆಯವರಿಂದ 'ಯುಗದ ಕವಿ ಜಗದ ಕವಿ' ಎಂದು ಕರೆಸಿಕೊಂಡ ರಾಷ್ಟ್ರಕವಿ ಕುವೆಂಪು ಅವರು ಕಥೆ, ಕಾವ್ಯ, ಕಾದಂಬರಿ, ವಿಮರ್ಶೆ, ಮಹಾಕಾವ್ಯ, ನಾಟಕ ಹೀಗೆ ಹಲವು ಪ್ರಕಾರಗಳಲ್ಲಿ ಸಾಹಿತ್ಯಕೃಷಿ ಮಾಡಿದವರು. ಕುವೆಂಪು ಎಲ್ಲಾ ಕಾಲಕ್ಕೂ ಸಲ್ಲುವ ಲೇಖಕರಾಗಿರುವುದರಿಂದ ಅವರ ಸಾಹಿತ್ಯವನ್ನು ಕುರಿತ ಚರ್ಚೆಗಳು ಇಂದಿಗೂ ನಡೆಯುತ್ತಲೇ ಇವೆ. ಆಯಾ ಕಾಲಘಟ್ಟಕ್ಕೆ ತಕ್ಕಂತೆ ಕುವೆಂಪು ಅವರ ಸಾಹಿತ್ಯವು ಸಮಾಜದ ಮೇಲೆ ತನ್ನ ಪ್ರಭಾವವನ್ನು ಬೀರುತ್ತಲೇ ಇರುತ್ತದೆ. ಅವರು ರಚಿಸಿದ ಕಾವ್ಯ ಮತ್ತು ಕಾದಂಬರಿಗಳಂತೆ ನಾಟಕಗಳು ಕೂಡ ಹೆಚ್ಚು ಪ್ರಸಿದ್ಧಿಯನ್ನು ಪಡೆದಿವೆ. ಪರಂಪರೆಯನ್ನು ಪ್ರಶ್ನಿಸುವುದು ಮತ್ತು ಕೆಲವು ಪರಂಪರಾಗತ ಮೌಲ್ಯಗಳನ್ನು ಮುರಿದು ಹೊಸ ಮೌಲ್ಯಗಳನ್ನು ಕಟ್ಟುವುದೇ ಕುವೆಂಪು ಅವರ ಬಹುತೇಕ ನಾಟಕಗಳ ನಿಜಕಾಳಜಿಯಾಗಿದೆ. ಅವರು ರಚಿದ ಒಟ್ಟು ನಾಟಕಗಳ ಸಂಖ್ಯೆ ಹನ್ನೆರಡು. ಕೆಲವು ನಾಟಕಗಳು ರಂಗರೂಪವನ್ನು ತಾಳಿ ಪ್ರದರ್ಶನವನ್ನು ಕಂಡಿರುವುದಲ್ಲದೇ ಸಮಾಜದ ಮೇಲೆ ಗಾಢವಾದ ಪ್ರಭಾವವನ್ನೂ ಬೀರಿವೆ. ಅವುಗಳ ಸಾಲಿನಲ್ಲಿ 'ಮಹಾರಾತ್ರಿ' ನಾಟಕವು ಅಗತ್ಯವಾಗಿ ಸೇರುತ್ತದೆ.*

***Keywords:*** *ಕನ್ನಡ ಸಾಹಿತ್ಯ, ಭಾಷೆ, ಕುವೆಂಪು, ವಿಶ್ವಮಾನವ, ನಾಟಕ, ಮಹಾರಾತ್ರಿ.*

**ಪೀಠಿಕೆ**

ಕುವೆಂಪು ಅವರ 'ಮಹಾರಾತ್ರಿ' ನಾಟಕ ಕುರಿತಾಗಿ ಹೆಚ್ಚು ವಿಮರ್ಶೆಗಳು ಬಂದಿಲ್ಲವಾದರೂ ಬಂದಂಥ ಕೆಲವು ವಿಮರ್ಶೆಗಳಲ್ಲಿ ಸಿದ್ಧಾರ್ಥನು ಅರಮನೆಯನ್ನು ತೊರೆಯುವ ಸಂದರ್ಭದಲ್ಲಿನ ಅವನ ತೊಳಲಾಟ ಮತ್ತು ಒಳಬೇಗುದಿಗಳನ್ನು ಗುರುತಿಸುವ ಮತ್ತು ವಿಶ್ಲೇಷಿಸುವ ಕೆಲಸವನ್ನು ಸಮರ್ಥವಾಗಿ ಮಾಡಿವೆ. ಮೇಲ್ನೋಟಕ್ಕೆ 'ಮಹಾರಾತ್ರಿ' ನಾಟಕದ ತಿರುಳು ಇಷ್ಟೇ ಎನಿಸಿದರೂ ನಾಟಕದ ಕೆಲವು ಸನ್ನಿವೇಶಗಳು ಈ ಹೊತ್ತಿನ ರಾಜಕೀಯ ವಿಪ್ಲವಗಳಿಗೆ ಮುಖಾಮುಖಿಯಾಗಿ ನಿಲ್ಲಬಲ್ಲಂಥವುಗಳಾಗಿವೆ. ಒಂದು ಪಠ್ಯವು ಕಾಲಕ್ಕೆ ತಕ್ಕಂತೆ ತನ್ನ ಅರ್ಥಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುತ್ತದೆ ಎನ್ನುವುದಕ್ಕೆ 'ಮಹಾರಾತ್ರಿ' ನಾಟಕವು ಒಂದು ಉತ್ತಮ ನಿದರ್ಶನ. ಈ ನಿಟ್ಟಿನಲ್ಲಿ 'ಮಹಾರಾತ್ರಿ' ನಾಟಕವು ಒಂದು ರಾಜಕೀಯ ಮೀಮಾಂಸೆಯಾಗಿಯೇ ಕಾಣಿಸುತ್ತದೆ. ಕೇವಲ ಮೂವತ್ತಾರು ಪುಟಗಳ ಈ ಚಿಕ್ಕ ನಾಟಕವು ಹಲವು ಮುಖ್ಯ ಸಂಗತಿಗಳಿಂದ ಕೂಡಿದ್ದು ಇಂದಿನ ರಾಜಕೀಯ ಸ್ಥಿತ್ಯಂತರಗಳಿಗೆ ಅಥವಾ ಹದಗೆಟ್ಟಿರುವ ರಾಜಕಾರಣಕ್ಕೆ ಚಿಕಿತ್ಸೆಯನ್ನು ನೀಡುವಂತಿದೆ.

***Please cite this article as:*** ಸುರೇಶ, ಕೆ. (2025). ಕುವೆಂಪು ಅವರ 'ಮಹಾರಾತ್ರಿ' ನಾಟಕದಲ್ಲಿ ರಾಜಕೀಯ ತತ್ವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(1), 59–63

'ಮಹಾರಾತ್ರಿ' ನಾಟಕವು ಬುದ್ಧನ ವಿಚಾರಗಳ ಅಗತ್ಯತೆಯನ್ನು ತಿಳಿಸುವ ನಾಟಕವಾಗಿದೆ. ಕನ್ನಡ ಸಾಹಿತ್ಯದಲ್ಲಿ ಇತ್ತೀಚೆಗೆ ಬುದ್ಧ ಮತ್ತು ಅಂಬೇಡ್ಕರ್ ಅವರ ವಿಚಾರಧಾರೆಗಳು ಅತಿಹೆಚ್ಚು ಚರ್ಚೆಗೆ ಒಳಗಾಗುತ್ತಿರುವುದು ಮತ್ತು ಆ ವಿಚಾರಧಾರೆಗಳ ಜೊತೆಗೆ ಕನ್ನಡ ಸಾಹಿತ್ಯವು ಅನುಸಂಧಾನ ನಡೆಸುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.

ಸ್ವಾರ್ಥ ಮತ್ತು ಸ್ವಹಿತವೇ ಮುಖ್ಯವಾಗಿರುವ ಮನುಷ್ಯ ಸ್ವಭಾವದ ಕಾರಣದಿಂದಾಗಿ ಜಗತ್ತು ಇಂದು ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ರಾಜಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವ ವ್ಯವಸ್ಥೆ ಬಂದರೂ ಆತಂಕಕಾರಿ ವಾತಾವರಣ ನಿರ್ಮಾಣವಾಗಿದೆ. ರಾಜಪ್ರಭುತ್ವದಲ್ಲಾದರೂ ಜನರು ನೆಮ್ಮದಿಯಿಂದ ಉಸಿರಾಡುತ್ತಿದ್ದರೇನೋ ಆದರೆ ಇಂದು ನಮ್ಮನ್ನಾಳುವ ನಾಯಕರು ಸರ್ವಾಧಿಕಾರಿಗಳಂತೆ ವರ್ತಿಸುತ್ತಿರುವುದು ಅತ್ಯಂತ ಖೇದಕರವಾದ ಸಂಗತಿಯಾಗಿದೆ. ಇಂಥ ಸಂದರ್ಭದಲ್ಲಿ ಬುದ್ಧನ ಆದರ್ಶಗಳು ನಮಗೆ ಮುಖ್ಯವಾಗುತ್ತವೆ. ಯುದ್ಧಪ್ರಾಬಲ್ಯದ ಕಾಲ ಎಂದೋ ಮುಗಿದು ಹೋಗಿದೆ ಎಂದು ಭಾವಿಸಿರುವ ನಮಗೆ ನಮ್ಮ ಕಾಲದಲ್ಲಿಯೇ ರಷ್ಯಾ–ಉಕ್ರೇನ್, ಇಸ್ರೇಲ್–ಪ್ಯಾಲೆಸ್ತೇನ್ ದೇಶಗಳು ಯುದ್ಧದಲ್ಲಿ ತೊಡಗಿರುವುದನ್ನು ಗಮನಿಸಿದಾಗ ಆತಂಕ ಉಂಟಾಗುತ್ತದೆ. ಯುದ್ಧ ಪ್ರಾಬಲ್ಯದ ಕಾಲದಲ್ಲಿಯೇ ಯುದ್ಧವನ್ನು ಮತ್ತು ಸಾಮ್ರಾಜ್ಯ ವಿಸ್ತಾರದ ನೀತಿಯನ್ನು ವಿರೋಧಿಸಿ ಇಡೀ ಜಗತ್ತಿನ ಒಳಿತನ್ನು ಬಯಸಿದ ಬುದ್ಧನ ತತ್ವಗಳು ಇಂತಹ ಸಂದರ್ಭದಲ್ಲಿ ಮುಖ್ಯವೆನಿಸುತ್ತವೆ.

'ಮಹಾರಾತ್ರಿ' ನಾಟಕವು ಇಂದಿನ ರಾಜಕೀಯ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಪ್ರಸ್ತುತವೆನಿಸುತ್ತದೆ. ಶ್ರೇಷ್ಠ ಕೃತಿಯೊಂದು ಎಲ್ಲಾ ಗಡಿರೇಖೆಗಳನ್ನು ಮೀರಿ ಆಯಾ ಕಾಲದ ಸಮಸ್ಯೆಗಳಿಗೆ ಪರಿಹಾರವಾಗಿ ಉತ್ತರ ರೂಪದಲ್ಲಿ ನಿಲ್ಲುತ್ತದೆ ಎನ್ನುವುದಕ್ಕೆ ಕುವೆಂಪು ಅವರ 'ಮಹಾರಾತ್ರಿ' ನಾಟಕ ಉತ್ತಮ ಉದಾಹರಣೆಯಾಗಿದೆ. ಕುವೆಂಪು ಅವರು ಅತ್ಯಂತ ನಿರ್ಲಿಪ್ತ ಸ್ವಭಾವದವರಾಗಿದ್ದರೂ ಕುಳಿತಿರುವ ಜಾಗದಿಂದಲೇ ಹೊರಗಿನ ರಾಜಕೀಯ ವಿಪ್ಲವಗಳನ್ನು ಗಮನಿಸಿ ಅವುಗಳಿಗೆ ತಮ್ಮ ಕಾವ್ಯ, ನಾಟಕ ಅಥವಾ ಲೇಖನಗಳ ಮೂಲಕ ಪ್ರತಿಕ್ರಿಯೆಯನ್ನು ನೀಡಿದವರು. ಉದಾಹರಣೆಗೆ ಕರ್ನಾಟಕದ ಏಕೀಕರಣದ ವಿಚಾರಕ್ಕೆ ಸಂಬಂಧಿಸಿದಂತೆ ಅವರು ಬರೆದ 'ಅಖಂಡ ಕರ್ನಾಟಕ' ಎಂಬ ಕವಿತೆಯಲ್ಲಿ ಆ ಕಾಲದ ರಾಜಕಾರಣ ಮತ್ತು ರಾಜಕೀಯ ವ್ಯಕ್ತಿಗಳ ಬೂಟಾಟಿಕೆಯನ್ನು ಕಟುವಾಗಿ ಟೀಕಿಸಿರುವುದನ್ನು ಗಮನಿಸಬಹುದು. 'ಮಹಾರಾತ್ರಿ' ನಾಟಕದಲ್ಲಿ ಯಾವುದೇ ರಾಜಕೀಯ ಬೆಳವಣಿಗೆಯ ಬಗ್ಗೆ ಟೀಕೆಗಳಿಲ್ಲದಿದ್ದರೂ, ರಾಜಕಾರಣಕ್ಕೆ ಅಗತ್ಯವಾಗಿ ಬೇಕಾದ ಬುದ್ಧನ ವ್ಯಕ್ತಿತ್ವದೊಳಗಿನ ಕೆಲವು ಅಂಶಗಳು ಇಂದಿನ ರಾಜಕಾರಣಿಗಳಿಗೆ ಮಾದರಿಯಾಗಬೇಕೆಂಬ ಧ್ವನಿಯನ್ನು ಈ ನಾಟಕದಲ್ಲಿ ಗುರುತಿಸಬಹುದು. ನಾಟಕದಲ್ಲಿ ಸಿದ್ಧಾರ್ಥನು ಚನ್ನನಿಗೆ ಹೇಳುವ ಮಾತು ಇಂತಿದೆ–

***ಚನ್ನ, ನೀನೆನಗೆ ಬೇಕಾದವನು,***
***ಕೇಳು. ಇಂದಿನಿರುಳೇ ನಾನು***
***ತಿರೆಸಿರಿಗಳೆಲ್ಲವನು ಬಿಸುಟು ಮುಕ್ತಿಶ್ರೀ***
***ಯನ್ನರಸಿ ಹೊರಡುವೆನು.***[1]

ಇಲ್ಲಿ ಸಿದ್ಧಾರ್ಥ ಮುಕ್ತಿಯನ್ನರಸಿ ಹೊರಟಿದ್ದಾನೆ. ಆದರೆ ಅವನೊಬ್ಬನ ಮುಕ್ತಿಗಾಗಿ ಅಲ್ಲ. ಜಗತ್ತಿನ ಸರ್ವ ಜನರ ಮುಕ್ತಿಗಾಗಿ. ಮುಖ್ಯವಾಗಿ ದೀನರನ್ನು ಅವರ ಸಂಕಟಗಳಿಂದ ಮುಕ್ತರನ್ನಾಗಿಸಲು ಹೊರಟಿದ್ದಾನೆ. ಅವರ ಮುಕ್ತಿಯಲ್ಲಿಯೇ ತನ್ನ ಮುಕ್ತಿ ಅಡಗಿದೆ ಎಂಬ ಸಿದ್ಧಾರ್ಥನ ಈ ಮನೋಧರ್ಮವು ವರ್ತಮಾನದ ರಾಜಕೀಯ ನಾಯಕರು ಅಥವಾ ನಮ್ಮನಾಳುವವರು ಅನುಕರಿಸಬೇಕಾಗುವ ಜರೂರಿದೆ

[1] ಕುವೆಂಪು. (2014). ಮಹಾರಾತ್ರಿ, ಉದಯರವಿ ಪ್ರಕಾಶನ. ಪುಟ–7.

ಎಂದೆನಿಸುತ್ತದೆ. ತಮ್ಮ ಸ್ವಾರ್ಥವನ್ನು ಬದಿಗಿತ್ತು ಜನರ ನೋವುಗಳಿಗೆ ದನಿಯಾಗುವ ನಾಯಕರು ಇಂದು ಎಷ್ಟು ಜನರಿದ್ದಾರೆ? ಎಂಬ ಪ್ರಶ್ನೆಯು 'ಮಹಾರಾತ್ರಿ' ನಾಟಕವನ್ನು ಓದಿದಾಗ ನಮ್ಮೆದುರು ಥುತ್ತನೆ ನಿಲ್ಲುತ್ತದೆ. ಕೇವಲ ತಮ್ಮ ಅಧಿಕಾರ ಮತ್ತು ಸ್ವಾರ್ಥಲಾಲಸೆಗಳಿಗಾಗಿ ಬದುಕುತ್ತಿರುವ ಇಂದಿನ ರಾಜಕಾರಣಿಗಳನ್ನು ಸಿದ್ಧಾರ್ಥನ ವ್ಯಕ್ತಿತ್ವದ ಮುಂದೆ ನಿವಾಳಿಸಿ ಎಸೆಯಬೇಕು. ಇಂದಿನ ರಾಜಕಾರಣಿಗಳ ಅಧಿಕಾರ ವ್ಯಾಮೋಹ ಮತ್ತು ಪುತ್ರ ವ್ಯಾಮೋಹದ ಪರಿತಾಪಗಳನ್ನು ನೋಡಿದಾಗ ಸಿದ್ಧಾರ್ಥನು ತನ್ನ ರಾಜ್ಯ, ಪಟ್ಟದ ಜೊತೆಗೆ ತನ್ನ ಹಸುಕಂದನನ್ನು ತೊರೆದು ಹೊರಡುವ ತ್ಯಾಗದ ಮನೋಭಾವ ಮತ್ತು ಲೋಕದ ಬಗೆಗಿನ ಕಾಳಜಿಯು ಅನುಕರಣೀಯವಾದುದ್ದಾಗಿದೆ.

ನಾಟಕದಲ್ಲಿ ಸಿದ್ಧಾರ್ಥನು ಅರಮನೆಯನ್ನು ತೊರೆಯಲಿರುವ ಸಂಗತಿಯನ್ನು ಕುರಿತಂತೆ ಕಿನ್ನರನು ಯಕ್ಷನಿಗೆ "ವೈರಾಗ್ಯ ಮಾರನಂ ಸೋಲಿಸುವುದಿಂದು!"(ಪುಟ 1) ಎಂಬ ಮಾತನ್ನು ಹೇಳುತ್ತಾನೆ. ಇಲ್ಲಿ ಸಿದ್ಧಾರ್ಥನ ವೈರಾಗ್ಯದ ಭಾವವು ಮಾರನನ್ನು ಅಂದರೆ ಮನದೊಳಗಿನ ಆಸೆಗಳನ್ನು ಸೋಲಿಸಲಿದೆ ಎಂಬ ಅರ್ಥವನ್ನು ಧ್ವನಿಸುತ್ತದೆ. ವೈಯಕ್ತಿಕ ಆಸೆ–ಆಕಾಂಕ್ಷೆಗಳನ್ನು ಬದಿಗಿತ್ತಾಗ ಮಾತ್ರ ಒಬ್ಬ ವ್ಯಕ್ತಿ ನಿಜವಾದ ಅರ್ಥದಲ್ಲಿ ಸಮಾಜದ ಉದ್ಧಾರಕ್ಕಾಗಿ ದುಡಿಯಲು ಸಾಧ್ಯ. ಗಾಂಧೀಜಿ, ಬಾಬಾಸಾಹೇಬ್ ಅಂಬೇಡ್ಕರ್, ಎ.ಪಿ.ಜೆ ಅಬ್ದುಲ್ ಕಲಾಂ ಮೊದಲಾದವರು ಈ ಸಾಲಿಗೆ ಸೇರುತ್ತಾರೆ. ಇಂತಹ ನಾಯಕರ ಅಗತ್ಯತೆ ಪ್ರಸ್ತುತ ರಾಜಕಾರಣದ ಸಂದರ್ಭಕ್ಕೆ ಬೇಕಾಗಿದೆ. ಮುಂದುವರೆದು "ಸತ್ಯ ಮಿಥ್ಯೆಯನೊದೆವುದಿಂದು" (ಪುಟ–1) ಎಂಬ ಯಕ್ಷನ ಮಾತು ಓದುಗರನ್ನು ಸತ್ಯವೆಂದರೆ ಯಾವುದು? ಎಂಥದ್ದು? ಎಂಬ ವಿವೇಚನೆಗೆ ಹಚ್ಚುತ್ತದೆ. ಪ್ರಭುವಾದವನಿಗೆ ಸಾಮ್ರಾಜ್ಯ ವಿಸ್ತರಿಸುವುದು, ಅಧಿಕಾರಲಾಲಸೆಯಲ್ಲಿ ಮುಳುಗುವುದಷ್ಟೇ ಧ್ಯೇಯೋದ್ದೇಶವಾಗಿರಬಾರದು. ಸರ್ವರ ಏಳಿಗೆಗಾಗಿ ದುಡಿಯುವುದೇ ಪ್ರಭು ಆದವನ ಅಥವಾ ಜನಪ್ರತಿನಿಧಿಯಾದವನ ಆದ್ಯ ಕರ್ತವ್ಯವಾಗಬೇಕೆಂಬುದು ಕುವೆಂಪು ಹೇಳುತ್ತಿರುವ ಜಗತ್‌ಸತ್ಯವಾಗಿದೆ. ಅರಾಜಕತೆಯಿಂದ ಕೂಡಿದ ಒಂದು ವ್ಯವಸ್ಥೆಯು ಒಬ್ಬ ಉತ್ತಮ ನಾಯಕನಿಗಾಗಿ ಎದುರು ನೋಡುತ್ತದೆ ಎಂಬ ಸಂಗತಿಯನ್ನು ನಾಟಕದಲ್ಲಿ ಕಿನ್ನರನ ಪಾತ್ರದ ಮೂಲಕ ಕುವೆಂಪು ಅವರು ಹೇಳಿಸುವ ಮಾತುಗಳು ಹೀಗಿವೆ

***ಕಿನ್ನರ – ನೋಡದೋ***
***ಗಂಧರ್ವ, ಭಾರತಾಂಬೆಯು ತನ್ನ ಪರಮ***
***ಪುಣ್ಯೋದಯಕೆ ಹಿಗ್ಗಿ ಬಿಡುಗಡೆಯ ನಿಟ್ಟುಸಿರ್***
***ಬಿಟ್ಟು ನಲಿದಿಹಳು.***[2]

ಅಷ್ಟರಲ್ಲಿಯೇ ಕುವೆಂಪು ಅವರು ಮೇಲಿನ ಕಿನ್ನರನ ಮಾತಿಗೆ ಪ್ರತಿಯಾಗಿ ಗಂಧರ್ವನ ಮೂಲಕ ಹೇಳಿಸುವ ಮಾತುಗಳು ಇಂತಿವೆ–

***ಗಂಧರ್ವ – ನೋಡಿರೆಲೆ ಬಾಂದಳದ ಬಂಧುಗಳೆ,***
***ಪುಣ್ಯದೇವಿಗೆ ಒದಗಿದೀ ಭಾಗ್ಯವನು ಕರುಬಿ***
***ಪಾಪ ಮಾರಿಯು ತನ್ನ ದೂತರಾವಳಿಯನ್***
***ಅಟ್ಟುತಿಹಳಲ್ಲಿ ಗೌತಮನ ಮೋಹಿಸಲು!***[3]

ಕುವೆಂಪು ಹೇಳುತ್ತಿರುವ ಈ ದೂತರ ಹಾವಳಿ ಎಂದರೆ ಬೇರೇನೂ ಅಲ್ಲ. ಪ್ರಾಮಾಣಿಕವಾಗಿ ಶ್ರದ್ಧೆಯಿಂದ ರಾಜ್ಯಭಾರ ಮಾಡುವ ಅಥವಾ ಜನಸೇವೆ ಮಾಡುವ ಸಂದರ್ಭದಲ್ಲಿ ವ್ಯಕ್ತಿಯನ್ನು ಕಾಡುವ ವೈಯಕ್ತಿಕ ವಾಂಛೆಗಳು ಮತ್ತು ಅಂಥವರನ್ನು ಕಾಲೆಳೆಯುವ ದುಷ್ಟರ ಗುಂಪು. ಇದನ್ನೇ ಕುವೆಂಪು ಅವರು ಸೂಚ್ಯವಾಗಿ ಹೇಳಿದ್ದಾರೆ. ವರ್ತಮಾನದ ರಾಜಕಾರಣದಲ್ಲಿ ನಡೆಯುತ್ತಿರುವ ಹನಿಟ್ರ್ಯಾಪ್, ಆರೋಪ–ಪ್ರತ್ಯಾರೋಪ, ರಾಜಕೀಯ ಕೆಸರೆರೆಚಾಟ ಇವು ಉತ್ತಮ ಉದಾಹರಣೆಗಳಾಗಿವೆ.

---

[2] ಕುವೆಂಪು. (2014). ಮಹಾರಾತ್ರಿ, ಉದಯರವಿ ಪ್ರಕಾಶನ. ಪುಟ–3.

[3] ಕುವೆಂಪು. (2014). ಮಹಾರಾತ್ರಿ, ಉದಯರವಿ ಪ್ರಕಾಶನ. ಪುಟ–3.

ಸಿದ್ಧಾರ್ಥನು ಅರಮನೆಯನ್ನು ತೊರೆಯುವ ನಿರ್ಧಾರ ಮಾಡಿದಾಗ ಚನ್ನನು ಏಕೆ, ನನ್ನೊಡೆಯ, ಇಲ್ಲಿ ಸೊಗಮಿಲ್ಲವೇ ನಿನಗೆ? ಎಂದು ಕೇಳಿದ ಪ್ರಶ್ನೆಗೆ ಸಿದ್ಧಾರ್ಥನ ಉತ್ತರ ಹೀಗಿದೆ–

***(ವ್ಯಾಕುಲತೆಯಿಂದ) ಚನ್ನಜ್ಜ,***
***ನಾನೊಬ್ಬ ಸುಖಿಯಾದರೇನಾಯ್ತು? ಲೋಕವೇ***
***ಬೊಬ್ಬಿರಿಯುತಿಹುದಲ್ಲ ಬೆಂದು ಬಡತನದಲ್ಲಿ.***
***ಮೌಢ್ಯಾಂಧಕಾರದೊಳು ಸಿಕ್ಕಿ, ದಾರಿಯ ತಪ್ಪಿ,***
***ಕಾಡು ಪಾಲಾಗಿಹಳು ಭಾರತಾಂಬೆಯು, ಚನ್ನ,***
***ಕಾಡುಪಾಲಾಗಿಹಳು!*** [4]

ಸಿದ್ಧಾರ್ಥನು ತನ್ನ ಸುಖವನ್ನು ಬದಿಗಿತ್ತು ಬಡತನದಲ್ಲಿ ಬೆಂದು ಬಳಲುತ್ತಿರುವ, ಮೌಢ್ಯವೆಂಬ ಅಂಧಕಾರದಲ್ಲಿ ಮುಳುಗಿರುವ ಜನರ ಬದುಕಲ್ಲಿ ಬೆಳಕನ್ನು ತರಲು ಅರಮನೆಯನ್ನು ತೊರೆಯುವ ನಿರ್ಧಾರ ಮಾಡುತ್ತಾನೆ. ಅದು ಅವನಿಗೆ ಪುತ್ರಪ್ರಾಪ್ತಿಯಾದಂತಹ ಅಮೃತ ಘಳಿಗೆಯಲ್ಲಿ. ಆದರೆ ಇಂದು ನಮ್ಮನ್ನು ಆಳುತ್ತಿರುವ ನಾಯಕರಿಗೆ ಜನರ ಬವಣೆಗಳು ಮುಖ್ಯವೆನಿಸುವುದಿಲ್ಲ. ಬದಲಾಗಿ ಜನರ ನೋವುಗಳನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವುದೇ ಅವರ ಪ್ರವೃತ್ತಿಯಾಗಿ ಬೆಳೆಯುತ್ತಿದೆ. ಜಗತ್ತಿನ ಕಲ್ಯಾಣಕ್ಕಾಗಿ ತನ್ನ ರಾಜಪದವಿ ಮತ್ತು ಎಲ್ಲಾ ರೀತಿಯ ಸುಖಭೋಗಗಳನ್ನು ತೊರೆದ ಸಿದ್ಧಾರ್ಥನ ವ್ಯಕ್ತಿತ್ವದ ಮುಂದೆ ವರ್ತಮಾನದ ರಾಜಕಾರಣಿಗಳ ನಡೆಯು ಅಮಾನುಷವಾಗಿಯೂ, ಹೇಯವಾಗಿಯೂ ಕಾಣಿಸುತ್ತದೆ.

ಒಂದು ಶವ, ವಯೋವೃದ್ಧ ಮುದುಕ ಮತ್ತು ಒಬ್ಬ ರೋಗಿಯನ್ನು ನೋಡಿದ ಬಳಿಕ ಸಿದ್ಧಾರ್ಥನ ಅಂತರಂಗದೊಳಗೆ ತಳಮಳವು ಪ್ರಾರಂಭವಾಗುತ್ತದೆ. ಅದುವರೆಗೂ ತನ್ನ ಅನುಭವಕ್ಕೆ ದಕ್ಕದೇ ಇರುವ ಸಂಗತಿಗಳು ಸಿದ್ಧಾರ್ಥನ ಅಂತಃಕರಣವನ್ನು ಪ್ರವೇಶಿಸಿದಾಗ ತಾನಿನ್ನು ಅರಮನೆಯ ಸುಪ್ಪತ್ತಿಗೆಯಲ್ಲಿರುವುದು ಸರಿಯಲ್ಲವೆಂದು ಭಾವಿಸುತ್ತಾನೆ.

***ಸಿದ್ಧಾರ್ಥ : ಇಲ್ಲ ; ಇನ್ನಿಲ್ಲಿ ಇರಲಾರೆ. ಇರಲಾರೆ!***
***ಎಳೆಯ ಕರೆಯನು ಕೇಳಿಯೂ ಸುಮ್ಮನಿರಲಾರೆ.***
***ಆತ್ಮದಾಮಂತ್ರಣವನ್ನೋದಿಯೂ ಭೋಗಾಭಿ–***
***ಲಾಷೆಯಿಂದಿನ್ನು ನಾನಿರಲಾರೆ.*** [5]

ತನ್ನ ಎಳೆಯ ಕಂದಮ್ಮನ ಕರೆಗಿಂತ ಜಗತ್ತಿನ ಆರ್ತನಾದವೇ ಅವನಿಗೆ ಮುಖ್ಯವಾಗುತ್ತದೆ ಎಂಬ ಸಂಗತಿಯನ್ನು ಮೇಲೆ ಉಲ್ಲೇಖಿಸಿದ ನಾಟಕದ ಸಾಲುಗಳು ಸ್ಪಷ್ಟಪಡಿಸುತ್ತವೆ. ಅಧಿಕಾರದ ಗದ್ದುಗೆ ಏರಿದವನಿಗೆ ತನ್ನ ವೈಯಕ್ತಿಕ ಅಭಿಲಾಷೆಗಳಿಗಿಂತ ಪ್ರಜೆಗಳ ಸಮಸ್ಯೆಗಳೇ ಮುಖ್ಯವಾಗಬೇಕೆಂಬ ಧ್ವನಿಯು ಇಲ್ಲಿದೆ. ಸಿದ್ಧಾರ್ಥನ ಈ ಆತ್ಮಾವಲೋಕನ ಇಂದಿನ ರಾಜಕಾರಣಿಗಳಿಗೆ ಬರಬೇಕಾಗಿದೆ. ದುರಂತದ ಸಂಗತಿಯೇನೆಂದರೆ ಇಂದಿನ ನಾಯಕರು ಜನಸಾಮಾನ್ಯರ ಸಾವು–ನೋವುಗಳನ್ನು ಕೂಡ ತಮ್ಮ ರಾಜಕೀಯ ದಾಳವಾಗಿಸಿಕೊಳ್ಳುವುದನ್ನು ಗಮನಿಸಿದಾಗ ಅತ್ಯಂತ ಖೇದಕರವೆನಿಸುತ್ತದೆ.

ಸಿದ್ಧಾರ್ಥ ಅರಮನೆಯನ್ನು ತೊರೆದ ನಂತರ ಅರಳಿಮರದ ಕೆಳಗೆ ಕುಳಿತು ತಪಸ್ಸಿಗೆ ತೊಡಗಿದ ಹಲವು ದಿನಗಳ ಬಳಿಕ ಆತನಿಗೆ ಬುದ್ಧತ್ವ ಪ್ರಾಪ್ತಿಯಾಯ್ತು ಎನ್ನಲಾಗುತ್ತದೆ. ಆದರೆ ಸಿದ್ಧಾರ್ಥನಿಗೆ ಅರಮನೆಯಲ್ಲಿರುವಾಗಲೇ ಬುದ್ಧತ್ವ ಪ್ರಾಪ್ತಿಯಾಗಿತ್ತೆನ್ನಬಹುದು. ಜನ್ಮತಃ ಸುಖಿಯಾಗಿ ಬೆಳೆದ ಸಿದ್ಧಾರ್ಥನು ಅರಮನೆಯ ವೈಭೋಗ, ಅಧಿಕಾರ, ಮಾತಾ–ಪಿತೃ, ಪತ್ನಿ–ಪುತ್ರರ ವಾತ್ಸಲ್ಯಗಳೆಲ್ಲವನ್ನೂ ತೊರೆದು ಹೋಗಬೇಕೆಂದು ಮಾಡಿದ ಆತನ ನಿರ್ಧಾರದ ಹಿಂದೆಯೇ ಬುದ್ಧತ್ವ ಅಥವಾ ಬುದ್ಧತ್ವದ ಸೂಚನೆ ಇರುವುದನ್ನು

[4] ಕುವೆಂಪು. (2014). ಮಹಾರಾತ್ರಿ, ಉದಯರವಿ ಪ್ರಕಾಶನ. ಪುಟ–7.

[5] ಕುವೆಂಪು. (2014). ಮಹಾರಾತ್ರಿ, ಉದಯರವಿ ಪ್ರಕಾಶನ. ಪುಟ–5

ಗಮನಿಸಬಹುದು. ನಾಟಕದಲ್ಲಿ ಸಿದ್ಧಾರ್ಥನು ಅರಮನೆಯನ್ನು ತ್ಯಜಿಸಿ ಹೊರಡುವಾಗ ಮಾರನು ಸಿದ್ಧಾರ್ಥನಿಗೆ ಕಪಿಲವಸ್ತು ನಿನಗೆ ಸಾಲದಿದ್ದರೆ ಇಡೀ ಧರೆಯನ್ನು ನಿನಗಿತ್ತು ಸರ್ವಸಾಮ್ರಾಜ್ಯಕ್ಕೆ ಅಧಿಕಾರಿಯನ್ನಾಗಿಸಿ ಪಟ್ಟಕಟ್ಟುವೆನೆಂದಾಗ ಸಿದ್ಧಾರ್ಥನ ಪ್ರತಿಕ್ರಿಯೆ ಹೀಗಿದೆ.

***ಪೊರಮಡುವುದೀ ಭೋಗ ಸಾಮ್ರಾಜ್ಯಕ್ಕಲ್ಲ,***
***ಮಾರ, ಮುಕ್ತಿ ಸಾಮ್ರಾಜ್ಯಕ್ಕೆ. ಬ್ರಹ್ಮಾಂಡ***
***ದಲ್ಲಿರುವ ಪರಮತಮ ಪದವಿಗಾಗೆಳಸುತಿಹೆ,***
***ಸರ್ವಸೃಷ್ಟಿಯ ಹರ್ಷಕಾಗೆಳಸುತಿರುವೆ.***
***ಸರ್ವಜೀವರ ಶಾಂತಿಗಾಗೆಳಸುತಿರುವೆ.***
***ಎಳೆಯೊಳಣುವೊಂದು ಬಂಧನದ ಬಲೆಯೊಳಗೆ***
***ಸಿಕ್ಕಿ ಗೋಳಿಡುವಲ್ಲಿಪರಿಯಂತ ಮುಕ್ತಿಯಂ***
***ಬಯಸೆ ನಾ; ಹರ್ಷವಂ ಬಯಸೆ ನಾ; ಶಾಂತಿಯಂ***
***ಬಯಸೆ ನಾ. ಬರಿದೆ ಮೋಹಿವುದೇಕೆ, ಮಾರ?***
***ತೊಲಗತ್ತ ತೊಲಗು!*** [6]

ಮೇಲಿನ ಸಾಲುಗಳನ್ನು ಗಮನಿಸಿದಾಗ ಸಿದ್ಧಾರ್ಥನಿಗೆ ತನ್ನ ನಿರ್ಧಾರದ ಬಗೆಗಿದ್ದ ಸ್ಪಷ್ಟತೆ ತಿಳಿಯುತ್ತದೆ. ಎಲ್ಲಾ ರೀತಿಯ ಭೋಗಾಕಾಂಕ್ಷೆಗಳಿಂದ ತನ್ನನ್ನು ಬಿಡಿಸಿಕೊಂಡಿರುವ ಕಾರಣ ಮಾರನ ಪ್ರಲೋಭನೆಗಳ ಜೊತೆಗೆ ಸಿದ್ಧಾರ್ಥನು ರಾಜಿಯಾಗುವುದಿಲ್ಲ. ಆದರೆ ಇಂದಿನ ರಾಜಕೀಯ ಪಕ್ಷಗಳಲ್ಲಿ ಕೇವಲ ಅಧಿಕಾರ ಮತ್ತು ಸ್ವ-ಹಿತಾಸಕ್ತಿಯೇ ಮುಖ್ಯವಾಗಿರುವುದನ್ನು ವರ್ತಮಾನದ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದಾಗ ತಿಳಿಯುತ್ತದೆ. ಹಣ ಮತ್ತು ಅಧಿಕಾರಕ್ಕಾಗಿ ತತ್ವಸಿದ್ಧಾಂತಗಳನ್ನು ಮರೆತು ಪಕ್ಷಾಂತರ ಮಾಡುವುದನ್ನು ಪ್ರಸ್ತುತ ದಿನಮಾನಗಳಲ್ಲಿ ಕಾಣುತ್ತಲೇ ಇದ್ದೇವೆ. ಇಂಥವರಿಗೆ ವೈಯಕ್ತಿಕ ಲಾಭವಷ್ಟೇ ಮುಖ್ಯವಾಗಿದ್ದು ಯಾವುದೇ ರೀತಿಯ ತತ್ವಪ್ರಣಾಲಿಯಾಗಲೀ, ಬದ್ಧತೆಯಾಗಲಿ ಇರುವುದಿಲ್ಲ.

ಜಗತ್ತೇ ನೋವಿನಲ್ಲಿ ನಲುಗುತ್ತಿರುವಾಗ ತಾನು ಮಾತ್ರ ಸುಖ-ಸಂತೋಷದಿಂದ ಬಾಳುವುದು ಎಷ್ಟರ ಮಟ್ಟಿಗೆ ಸರಿಯೆಂಬ ಸಿದ್ಧಾರ್ಥನ ಆತ್ಮವಿಮರ್ಶೆಯು ಗಾಢವಾದ ಚಿಂತನೆಗೆ ಹಚ್ಚುವಂತದ್ದಾಗಿದೆ. ಬುದ್ಧನಿಂದ ಪ್ರಭಾವಿತರಾದ ಬಾಬಾಸಾಹೇಬ್ ಅಂಬೇಡ್ಕರ್ ಅವರ **'ಹಿಂದೂ ಕೋಡ್ ಬಿಲ್'** ಪ್ರಸಂಗವನ್ನಿಲ್ಲಿ ನೆನೆಯಬಹುದು. ಇಂದು ಬುದ್ಧನನ್ನು ಓದುವುದು ಮತ್ತು ಆತನನ್ನು ಕುರಿತು ಮಾತನಾಡುವುದೇ ಒಂದು ಖಯಾಲಿಯಾಗಿದೆ. ಬುದ್ಧನಾಗಲು ಅಥವಾ ಬುದ್ಧತ್ವದೆಡೆಗೆ ಸಾಗಲು ಯಾರೂ ಸಿದ್ಧರಿಲ್ಲ. ಬುದ್ಧತ್ವದೆಡೆಗೆ ಸಾಗುವಲ್ಲಿ ಸೋಲುತ್ತಿರುವ ಕಾರಣದಿಂದಲೇ ಅವನನ್ನು ಕಥೆ, ಕಾವ್ಯ, ಕಾದಂಬರಿ, ವಿಮರ್ಶೆಗಳಲ್ಲಿ ಬಂಧಿಸಲಾಗಿದೆ. ಅವನನ್ನು ವಿಚಾರ ಸಂಕಿರಣದ ವಸ್ತುವನ್ನಾಗಿ ಮಾಡಲಾಗಿದೆ. ವರ್ತಮಾನದ ಸಂದರ್ಭಕ್ಕೆ ಬುದ್ಧನ ತತ್ವಗಳ ಅನಿವಾರ್ಯತೆ ಇರುವುದರಿಂದ ದೇಶದ ಪ್ರಜೆ ಮತ್ತು ಪ್ರತಿನಿಧಿ ಇಬ್ಬರೂ ಆತ್ಮವಿಮರ್ಶೆಯಲ್ಲಿ ತೊಡಗಿ ಬುದ್ಧತ್ವದೆಡೆಗೆ ನಡೆಯುವ ಪ್ರಯತ್ನವನ್ನು ಇನ್ನಾದರೂ ಮಾಡಬೇಕಾಗಿದೆ.

**ಆಕರ ಗ್ರಂಥ**


- ಕುವೆಂಪು. (2014). ಮಹಾರಾತ್ರಿ. (ಒಂಭತ್ತನೆಯ ಮುದ್ರಣ). ಉದಯರವಿ ಪ್ರಕಾಶನ.


[6] ಕುವೆಂಪು. (2014). ಮಹಾರಾತ್ರಿ, ಉದಯರವಿ ಪ್ರಕಾಶನ. ಪುಟ-22, 23.